**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 2779/2022**

**ಸಾಕ್ಷಿಗೆ ದಿನಾಂಕ 24.3.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರಭುದೇವ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ದೇವೇಂದ್ರ | ಸಿ.ಡಬ್ಲ್ಯೂ-5 |
| ವಯಸ್ಸು | : | 24 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಕುರ್ಣೇಗಾಲ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ. ಚಾಸ 1 ನನ್ನ ಭಾವ, ಚಾಸ 2 ನನ್ನ ಚಿಕ್ಕಪ್ಪ. ನನಗೆ ಚಾಸ 3, 4, 7 ರಿಂದ 9 ರವರ ಪರಿಚಯವಿರುತ್ತದೆ. ದಿನಾಂಕ 20.2.2021 ರಂದು ಸಂಜೆ 4 ಗಂಟೆಯಲ್ಲಿ ನಾನು ಮನೆಯಲ್ಲಿದ್ದಾಗ ಚಾಸ 1 ರವರು ನನಗೆ ಫೋನ್ ಮಾಡಿ ಅವರಿಗೆ ಮತ್ತು ಚಾಸ 2 ರವರಿಗೆ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ನಾನು ಸರಗೂರಿನ ವಿವೇಕಾನಂದ ಆಸ್ಪತ್ರೆಗೆ ಹೋಗಿದ್ದು ಅಲ್ಲಿ ಚಾಸ 1 ರವರನ್ನು ಅಪಘಾತದ ಬಗ್ಗೆ ವಿಚಾರಿಸಿದಾಗ ಚಾಸ 1 ರವರು ಚಾಸ 2 ರವರ ಜೊತೆ ಮದುವೆಗೆ ಹೋಗಿ ವಾಪಸ್ ಯಡಿಯಾಲ-ಚಿಕ್ಕಬರಗಿ ರಸ್ತೆಯಲ್ಲಿ ಮನೆಗೆ ಬರುತ್ತಿದ್ದಾಗ ಚನ್ನಗುಂಡಿ ಗೇಟ್ ಹತ್ತಿರ ಎದುರಿನಿಂದ ಬೈಕ್ ಸವಾರನು ಬೈಕನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸ 1 ರವರ ಬೈಕಿಗೆ ಡಿಕ್ಕಿ ಮಾಡಿರುತ್ತಾನೆ ಎಂದು ಹೇಳಿರುತ್ತಾರೆ. ನಾನು ನೋಡಿದಾಗ ಚಾಸ 1 ರವರ ಮೂಗಿಗೆ ಪೆಟ್ಟಾಗಿತ್ತು, ಚಾಸ 2 ರವರ ಬೆನ್ನು ಹಾಗೂ ತಲೆಗೆ ಪೆಟ್ಟಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗೆ ಚಾಸ 1 ಮತ್ತು 2 ರವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸ 1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ದೂರು ನೀಡಿರುತ್ತಾರೆ. ಸದರಿ ಅಪಘಾತಪಡಿಸಿದ ಬೈಕು ಹೊಂಡಾ ಶೈನ್ ಬೈಕಾಗಿದ್ದು ಅದರ ನಂಬರ್ ನನಗೆ ಗೊತ್ತಿರುವುದಿಲ್ಲ. ಅಪಘಾತ ಮಾಡಿದ ಬೈಕ್ ಚಾಲಕನ ಹೆಸರು ರೇವಣ್ಣ ಎಂದು ಗೊತ್ತಾಗಿರುತ್ತದೆ. ಘಟನೆಯ ವಿಚಾರವಾಗಿ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದಃ**

ನಾನು ಸದರಿ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಸದರಿ ಅಪಘಾತವನ್ನು ನಾನು ಖುದ್ದಾಗಿ ನೋಡದಿರುವುದರಿಂದ ಅಪಘಾತ ಹೇಗ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಸ್ಥಳದಲ್ಲಿ ಎಷ್ಟು ಜನ ಸೇರಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಚನ್ನಗುಂಡಿ ಸರ್ಕಲ್ ಬಳಿ ಯಡಿಯಾಲದ ಕಡೆ ರಸ್ತೆ ಇಳಿಮುಖವಾಗಿದ್ದು, ಚಿಕ್ಕಬರಗಿ ಕಡೆಗೆ ರಸ್ತೆ ಏರುಮುಖವಾಗಿರುತ್ತದೆ. ಯಾವುದೇ ವಾಹನ ಏರುಮುಖವಾಗಿ ಹೋಗಬೇಕಾದರೆ ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಆರೋಪಿಯ ತಪ್ಪಿನಿಂದ ಸದರಿ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸ 1 ರವರು ಅಪಘಾತ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚಾಸ 1 ರವರು ನನ್ನ ಭಾವನಾಗಿರುವುದರಿಂದ ಅವರು ನೀಡಿರುವ ಸುಳ್ಳು ದೂರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ